ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2417107

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
CorporateOffice,
CESC, Mysuru-570017
**Web Site:www.cescmysore.org**
E-mail ID: gmtech@cescmysore.org

CompanyIdentity Number[CIN]:**U40109KA2004SGC035177**

ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ/ಸಪ್ರವ್ಯ(ಸಿಸಿಸಿ)/2022-23/cys-262 ದಿನಾಂಕ : 24 MAY 2022

**ಸುತ್ತೋಲೆ**

**ವಿಷಯ:** 2022-23 ರ ಮುಂಗಾರು ಋತುವಿಗೆ ಚಾವಿಸನಿನಿ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಪೂರ್ವಸಿದ್ದತೆ ಬಗ್ಗೆ.

**ಉಲ್ಲೇಖ:** 1 ಈ ಕಛೇರಿ ಸುತ್ತೋಲೆ ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ/ಸಪ್ರವ್ಯ(ಎಂಐಎಸ್)/21-22/cys-311 ದಿನಾಂಕ: 25.05.2021.
2. ಇಂಧನ ಇಲಾಖೆ ಸುತ್ತೋಲೆ ಸಂಖ್ಯೆ: ಎನರ್ಜಿ236 ವಿಎಸ್‌ಸಿ2022 ದಿನಾಂಕ:21.05.2022.
3. ನಿರ್ದೇಶಕರು(ತಾ)ರವರ ಅನುಮೋದಿತ ಟಿಪ್ಪಣಿ ದಿನಾಂಕ: 23.05.2022

*****

ರಾಜ್ಯದಲ್ಲಿ 2022ರ ಮುಂಗಾರು ಋತುಮಾನವು ಶುರುವಾಗಲಿದ್ದು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯ ಐದು ಜಿಲ್ಲೆಗಳಾದ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿಯೂ ಈಗಾಗಲೇ ಚಂಡಮಾರುತ ದಿಂದ ತೀವ್ರವಾಗಿ ಮಳೆಯು ಪ್ರಾರಂಭವಾಗಿದ್ದು, ಪೂರ್ವಭಾವಿಯಾಗಿ ನಿಗಮ ವ್ಯಾಪ್ತಿಯಲ್ಲಿ ಸಮರ್ಪಕ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಕ್ರಮವಹಿಸುವುದು ಹಾಗೂ ವಿದ್ಯುತ್ ವಿತರಣಾ ಜಾಲವನ್ನು ಸಮರ್ಪಕವಾಗಿ ನಿರ್ವಹಿಸುವುದು ಅಗತ್ಯವಾಗಿದೆ. ಮುಂದುವರೆದು, ಯಾವುದೇ ಆಕಸ್ಮಿಕ/ವ್ಯತಿರಿಕ್ತ ಅಡಚಣೆಗಳು ಉಂಟಾದ ಸನ್ನಿವೇಶಗಳಲ್ಲಿ, ಎಲ್ಲಾ ಮಟ್ಟದಲ್ಲು ತುರ್ತು ಕ್ರಮವಹಿಸಿ ಸಮರ್ಪಕವಾಗಿ ನಿಭಾಹಿಸುವುದು ಹಾಗೂ ಎಲ್ಲಾ ಅಗತ್ಯ ಮುಂಜಾಗ್ರತ ಕ್ರಮಗಳನ್ನು ಗ್ರಾಹಕರ ಹಾಗೂ ಸಾರ್ವಜನಿಕರ ಹಿತದೃಷ್ಠಿಯಿಂದ ಕೈಗೊಳ್ಳವುದು ಅತ್ಯವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಕೆಳಕಂಡ ಸೂಕ್ತ ಕ್ರಮಗಳನ್ನು ಎಲ್ಲಾ ಸಕ್ಷಮ ಕಾರ್ಯ ಮತ್ತು ಪಾಲನಾ ಪ್ರಾಧಿಕಾರಿಗಳು ಕೈಗೊಳ್ಳಲು ಸೂಚಿಸಲಾಗಿದೆ ಹಾಗೂ ದುರಸ್ಥಿ ಸಮಯದಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

1. ವಿದ್ಯುತ್ ವಿತರಣಾ ಜಾಲದ ಸಮರ್ಪಕ ನಿರ್ವಾಹಣೆಗೆ ಬೇಕಾಗುವ ಅಗತ್ಯವಿರುವ ವಿವಿಧ ಸಾಮರ್ಥ್ಯದ ವಿದ್ಯುತ್ ವಿತರಣಾ ಪರಿವರ್ತಕಗಳು, ವಿದ್ಯುತ್ ಕಂಬಗಳು, ವಾಹಕಗಳು, Insulator ಗಳು ಹಾಗೂ ಇತರೆ ಅತ್ಯವಶ್ಯಕ ಸಾಮಗ್ರಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಆಯಾಯ ಉಗ್ರಾಣದಲ್ಲಿ ದಾಸ್ತಾನು ಇಟ್ಟುಕೊಳ್ಳುವುದು.
2. ವಿಫಲಗೊಂಡ ವಿದ್ಯುತ್ ಪರಿವರ್ತಕಗಳನ್ನು ಆದ್ಯತೆಯ ಮೇಲೆ ದುರಸ್ಥಿ ಕೇಂದ್ರಕ್ಕೆ ಕಳುಹಿಸಿ, ತತಕ್ಷಣ ದುರಸ್ಥಿಗೊಳಿಸಿಕೊಂಡು ಸಾಕಷ್ಟು ಸಂಖ್ಯೆಯಲ್ಲಿ ದಾಸ್ತಾನು ಇಟ್ಟುಕೊಳ್ಳುವುದು.
3. ಪ್ರತಿ ಉಪವಿಭಾಗದ ಸೇವಾ ಕೇಂದ್ರದಲ್ಲಿ ಸೂಕ್ತ ಸಂಖ್ಯೆಯ ನಿರ್ವಹಣಾ ಸಿಬ್ಬಂದಿಗಳ ನಿಯೋಜನೆ, ವಾಹನ ಸೌಕರ್ಯ, ತುರ್ತು ನಿರ್ವಾಹಣೆಗೆ ಬೇಕಾದ Hand Torch, Toolkit, Fuse wire, Insulation Tape, Ladder, Ropes ಮುಂತಾದ ಅಗತ್ಯ ಸಲಕರಣೆಗಳನ್ನು ಪೂರೈಸಿ ಸೇವಾಕೇಂದ್ರಗಳನ್ನು ಸಜ್ಜುಗೊಳಿಸುವುದು.
4. ಮಳೆಗಾಳಿ ಇರುವ ಸಂದರ್ಭದಲ್ಲಿ Rain coat, Rubber Hand gloves, Helmet, Safety Belt ಇತ್ಯಾದಿ ಸುರಕ್ಷತಾ ಸಲಕರಣೆಗಳನ್ನು ಕಡ್ಡಾಯವಾಗಿ ಧರಿಸಿ ವಿದ್ಯುತ್ ಜಾಲವನ್ನು ದುರಸ್ಥಿಗೊಳಿಸಲು ಸಿಬ್ಬಂದಿಗಳಿಗೆ ಸೂಚಿಸುವುದು.
5. Hazard Prone Zones ಗಳನ್ನು ಗುರುತಿಸಿಕೊಳ್ಳುವುದು.
6. ಶಾಖಾ ಮಟ್ಟದ ಕಛೇರಿಯಿಂದ ವಿಭಾಗ ಮಟ್ಟದ ಕಛೇರಿವರೆಗಿನ ಅಧಿಕಾರಿಗಳು ಮುಂಗಾರಿನ ಅವಧಿಯಲ್ಲಿ ಕೇಂದ್ರ ಸ್ಥಾನದಲ್ಲಿ ಇದ್ದುಕೊಂಡು ಉಸ್ತುವಾರಿ ಹಾಗೂ ಮೇಲ್ವಿಚಾರಣೆಯನ್ನು ನಡೆಸುವುದು ಅತಿ ಮುಖ್ಯವಾಗಿರುತ್ತದೆ. ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಸ್ಥಿರ ದೂರವಾಣಿ, ಮೊಬೈಲ್ ಫೋನ್‌ಗಳನ್ನು ಸದಾ ಚಾಲನೆಯಲ್ಲಿಟ್ಟುಕೊಂಡು ಸಾರ್ವಜನಿಕರ ದೂರುಗಳಿಗೆ ಸ್ಪಂದಿಸಬೇಕಾಗುತ್ತದೆ.
7. ವಿದ್ಯುತ್ ಸಂಬಂಧಿತ ದೂರುಗಳನ್ನು ದಾಖಲಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೇವಾ ಕೇಂದ್ರಗಳ ದೂರವಾಣಿ ಸಂಖ್ಯೆ ಮತ್ತು ಮೊಬೈಲ್ ದೂರವಾಣಿ ಸಂಖ್ಯೆಗಳನ್ನು ದೃಶ್ಯ ಮಾಧ್ಯಮಗಳಲ್ಲಿ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಮೂಲಕ ತಿಳಿಸುವುದು ಹಾಗೂ ಕಛೇರಿಯ ನಾಮಫಲಕಗಳಲ್ಲಿ ಪ್ರಕಟಿಸುವುದು.
8. ಮುಂಗಾರು ಆಕಸ್ಮಿಕದ ಅವಗಢಗಳ ತೀವ್ರತೆಯನ್ನಾಧರಿಸಿ ಮೇಲಾಧಿಕಾರಿಗಳಿಗೆ ಕೂಡಲೇ ವರದಿ ಮಾಡುವುದು.
9. ಎಲ್ಲಾ ಸರ್ಕಾರಿ/ಕೇಂದ್ರ ಅಂಗಸಂಸ್ಥೆಗಳಿಗೆ/ ಆಸ್ಪತ್ರೆಗಳಿಗೆ/vaccination centresಗಳಿಗೆ/ಕುಡಿಯುವ ನೀರಿನ ಘಟಕಗಳಿಗೆ ಹಾಗೂ ಇನ್ನಿತರೆ ಪ್ರಮುಖ ಸ್ಥಾವರಗಳಿಗೆ ಸಂಬಂಧಿಸಿದ ದೂರುಗಳನ್ನು ತತಕ್ಷಣ ಬಗೆಹರಿಸುವುದು.

ಸದರಿ ವಿಷಯಕ್ಕೆ ಸಂಬಂದಿಸಿದಂತೆ ಕೈಕೊಂಡಿರುವ ಕ್ರಮಗಳ ಬಗ್ಗೆ ಕಾಲಾನುಕಾಲಕ್ಕೆ ಅನುಸರಣಾ ವರಧಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

24/5/2022

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾವಿಸನಿನಿ, ಮೈಸೂರು

**ಪ್ರತಿಗಳು:**

1. ಅಧೀನ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು-1.
2. ಮುಖ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
3. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)/(ಆ ಮತ್ತು ಮಾ.ಸಂ)/ವಾಣಿಜ್ಯ/ಖರೀದಿ/(ಲೆ & ಸಂ)/, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)ಗಳು, ಕಾರ್ಯ ಮತ್ತು ಪಾಲನಾ ವೃತ್ತ ಮೈಸೂರು-ಚಾಮರಾಜನಗರ, ಮಂಡ್ಯ, ಹಾಸನ ಮತ್ತು, ಹುಣಸೂರು-ಕೊಡಗು ಚಾವಿಸನಿನಿ ರವರ ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗಳು, ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ.
6. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗಳು, ಉಪವಿಭಾಗ, ಚಾವಿಸನಿನಿ ರವರ ಸೂಕ್ತ ಕ್ರಮಕ್ಕಾಗಿ.
7. ಕಾರ್ಯನಿರ್ವಾಹಕ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
8. ಉಪ ಪ್ರಧಾನ ವ್ಯವಸ್ಥಾಪಕರು, ಎಂಐಎಸ್, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ ಮತ್ತು ನಿಗಮದ ಜಾಲತಾಣದಲ್ಲಿ ಪ್ರಕಟಿಸಲು.
9. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಡಿ.ಸಿ.ಸಿ, ಚಾ.ವಿ.ಸ.ನಿ.ನಿ, ಮೈಸೂರು.
10. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಸಿಸಿಸಿಡಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
11. ಸಹಾಯಕ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು(APRO), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ.
12. ಎಲ್ಲಾ ಶಾಖಾಧೀಕಾರಿಗಳು, ಕಾ ಮತ್ತು ಪಾ ಶಾಖೆ, ಚಾವಿಸನಿನಿ ರವರ ಸೂಕ್ತ ಕ್ರಮಕ್ಕಾಗಿ.
13. ಆಪ್ತ ಸಹಾಯಕರು ವ್ಯನಿ ಇದನ್ನು ಮಾನ್ಯ ವ್ಯನಿ ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.
14. ತಾಂ.ಸ, ನಿ(ತಾಂ) ಇದನ್ನು ಮಾನ್ಯ ವ್ಯ.ನಿ./ನಿ(ತಾಂ) ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.

ಕಛೇರಿ ಪ್ರತಿ/ಮುಖ್ಯ ಕಡತ